10

# ಕ್ರಿಸ್ತನಲ್ಲಿ ಇರುವುದು ಎಂಬುದರ ಅರ್ಥವೇನು

ಕ್ರೈಸ್ತನಾಗಿರುವುದು ಭೂಲೋಕದಲ್ಲಿ ಯಾರಿಗಾದರೂ ಇರುವ ಅತೀ ಉನ್ನತವಾದ ಗೌರವವಾಗಿದೆ. ಕ್ರೈಸ್ತನಾಗಿರಲು ಪೌಲನು ಸಂತೋಷವುಳ್ಳವನಾಗಿದ್ದನು (ಅಪೊಸ್ತಲರ ಕೃತ್ಯ 26:28, 29). ಈ ಹೆಸರಿನಲ್ಲಿ ದೇವರನ್ನು ಮಹಿಮೆ ಪಡಿಸಬೇಕೆಂದು ಪೇತ್ರನು ಬುದ್ಧಿವಾದ ಹೇಳಿದನು (1 ಪೇತ್ರ 4:16).

ಕ್ರೈಸ್ತನ ಬಗ್ಗೆ ಚಿಕ್ಕದಾದ ಸರಳವಾದ ವಿವರಣೆ ಕೊಡಲು ನನ್ನನ್ನು ಕೇಳಿದರೆ “ಕ್ರಿಸ್ತನಲ್ಲಿರುವ ವ್ಯಕ್ತಿ” ಎಂದು ನಾನು ಹೇಳುವೆನು. “ಕ್ರಿಸ್ತನಿಂದ ಹೊರಗಿರುವದಕ್ಕೆ” ವಿರುದ್ಧವಾಗಿ “ಕ್ರಿಸ್ತನಲ್ಲಿರುವುದು” ಅಂದರೆ ಏನು ಎಂಬುದನ್ನು ಗಮನಿಸುವದರಿಂದ ಕ್ರೈಸ್ತನಾಗಿರುವುದು ಹೇಗೆ ಉತ್ತಮವಾದದೆಂಬುದನ್ನು ನಾವು ಅರ್ಥ ಮಾಡಿಕೊಳ್ಳುವೆವು.

## ಕ್ರಿಸ್ತನ ಹೊರಗಿರುವುದು ಎಂಬುದರ ಅರ್ಥವೇನು

ಎಫೆಸದವರು ಪಾಪದಲ್ಲಿ ಸತ್ತವರಾಗಿದ್ದಾಗಿನ ವಿವರಣೆಯನ್ನು ಎಫೆಸ 2 ಕೊಡುತ್ತದೆ (ವಚನಗಳು 1, 2).

1. ಆ ಸಮಯದಲ್ಲಿ ಅವರು ದೇವರಿಲ್ಲದವರಾಗಿದ್ದರು (ವ. 12); ಪರಲೋಕದ ತಂದೆ ಅವರಿಗಿರಲಿಲ್ಲ. ದೇವರು ನಮಗೆ ಮಹಾ ಪರಲೋಕದ ತಂದೆಯಾಗಿರಲು ಶರತ್ತು ಇರುತ್ತದೆ (2 ಕೊರಿಂಥಿ 6:17, 18).

2. ಅವರು ಕ್ರಿಸ್ತನಿಲ್ಲದೆ ಇದ್ದರು (ವ. 12). ಅವರಿಗೆ ಮಹಾ ಯಾಜಕನಿರಲಿಲ್ಲ, ಪ್ರಾರ್ಥಿಸಲು ದೇವರಿರಲಿಲ್ಲ ಹಾಗೂ ಪ್ರಾರ್ಥಿಸಲು ಮಧ್ಯವರ್ತಿಯಾಗಿ ಕ್ರಿಸ್ತನಿರಲಿಲ್ಲ. ದೇವರನ್ನು ಸಂಧಿಸುವುದು ಕ್ರಿಸ್ತನ ಮುಖಾಂತರ ಮಾತ್ರವೇ ಆಗಿತ್ತು, ಆದುದರಿಂದ ಕ್ರಿಸ್ತನಿಲ್ಲದೇ ಒಬ್ಬ ವ್ಯಕ್ತಿಯು ಪ್ರಾರ್ಥನೆಯಲ್ಲಿ ಪರಲೋಕದ ಸಿಂಹಾಸನವನ್ನು ಸಮೀಪಿಸಲಾರನು.

3. ಅವರು ಸಮಾಧಾನವಿಲ್ಲದೇ ಇದ್ದರು, ಯಾಕೆಂದರೆ “ಆತನು ನಮಗೆ ಸಮಾಧಾನ ಕರ್ತೃವಾಗಿದ್ದಾನೆ” (ವ. 14).

4. ಅವರು ನಿರೀಕ್ಷೆಯಿಲ್ಲದವರಾಗಿದ್ದರು (ವ. 12).

5. ಅವರು ಇಸ್ರಾಯೇಲ್ಯರ (ಆತ್ಮಿಕ) ಪ್ರಜಾಸಮುದಾಯದಲ್ಲಿ ಪಾಲಿಲ್ಲದವರಾಗಿದ್ದರು (ವ. 12).

6. ಅವರು ತಮ್ಮ ಅಪರಾಧಗಳಿಂದಲೂ ಪಾಪಗಳಿಂದಲೂ ಸತ್ತು ಹೋಗಿದ್ದರು (ವ. 1).

ಕ್ರಿಸ್ತನಿಲ್ಲದೇ ಇರವಂಥದ್ದು ದುಷ್ಟನಲ್ಲಿ ಇರುವುದೆಂದು ಅರ್ಥವಾಗುತ್ತದೆ (1 ಯೋಹಾನ 5:19, 20). ಕೆಡುಕನಲ್ಲಿ ಇರವುದು ದುಷ್ಟನ ರಾಜ್ಯದಲ್ಲಿ ಇರುವುದೂ ಅವನ ಅಧೀನತೆ ಯಲ್ಲಿರುವುದೂ ಆಗಿರುತ್ತದೆ. "ಕ್ರಿಸ್ತನಲ್ಲಿ" ಹಾಗೂ "ದುಷ್ಟನಲ್ಲಿ" ಎಂಬ ಮಾತು ಗಳು ಎರಡು ಸಾಧ್ಯಾವಾದ ಆತ್ಮಿಕ ಸಂಬಂಧಗಳನ್ನು ವಿವರಿಸುತ್ತವೆ. ಮಧ್ಯಮ ನೆಲೆಯಿರುವದಿಲ್ಲ: ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ಇರುವನು ಇಲ್ಲವೆ ಕೆಡುಕನಲ್ಲಿ ಇರುವನು. ಲೆಕ್ಕ ಕೊಡಬೇಕಾದ ಜನರ ವಿಷಯದಲ್ಲಿ ಮಾತ್ರವೇ ನಾವು ಮಾತಾಡುತ್ತಿದ್ದೇವೆ.

## ಕ್ರಿಸ್ತನಲ್ಲಿರುವುದು ಎಂಬುದರ ಅರ್ಥವೇನು

ಕ್ರಿಸ್ತನಲ್ಲಿರುವವರಿಗೆ ದೇವರಿದ್ದಾನೆ. ಯಾಕಂದರೆ ನಾವು ಕ್ರಿಸ್ತನ ದೇಹದಲ್ಲಿ ಆತನಿಗೆ ಸಂಧಾನವಾಗಿದ್ದೇವೆ (ಎಫೆಸ 2:16). ಅಷ್ಟು ಮಾತ್ರವೇ ಅಲ್ಲ, ಕ್ರೈಸ್ತರಿಗೆ ಕ್ರಿಸ್ತನು ನಮ್ಮ ಮಹಾ ಯಾಜಕನೂ ಆಗಿರುವನು. ಪ್ರಾರ್ಥನೆಯು ಕ್ರಿಸ್ತನಲ್ಲಿರುವ ವ್ಯಕ್ತಿಯಿಂದ ಅನುಭವಿಸುವ ಮಹಾ ಆತ್ಮಿಕ ಆಶೀರ್ವಾದವಾಗಿದೆ.

ಪ್ರಾರ್ಥನೆಯು ಮಾತ್ರವೇ ಕ್ರಿಸ್ತನಲ್ಲಿ ನಾವು ಅನುಭವಿಸುವ ಆತ್ಮೀಕ ಆಶೀರ್ವಾದ ವಾಗಿರುವದಿಲ್ಲ. ಅದರಲ್ಲಿ ಎಲ್ಲಾ ಆತ್ಮಿಕ ಆಶೀರ್ವಾದಗಳು ಇರುವವೆಂದು ಎಫೆಸ 1:3ರಲ್ಲಿ ಪೌಲನು ಘೋಷಿಸಿದ್ದಾನೆ. ಅವೆಲ್ಲವುಗಳನ್ನು ನಾವಿಲ್ಲಿ ಎಣಿಸಿ ಹೇಳಲಾರೆವು. ಆದರೆ ಅವು ವಿಮೋಚನೆಯನ್ನು (ಎಫೆಸ 1:7), ನೂತನ ಜೀವಿಗಳಾಗುವದನ್ನು (2 ಕೊರಿಂಥ 5:17), ಸಂಧಾನವನ್ನೂ (ಎಫೆಸ 2:16), ಹಾಗೂ ನಿತ್ಯಜೀವವನ್ನೂ (1 ಯೋಹಾನ 5:11) ಒಳಗೊಂಡಿರುತ್ತದೆ.

## ಕ್ರಿಸ್ತನಲ್ಲಿ ಒಬ್ಬನು ಹೇಗೆ ಪ್ರವೇಶಿಸುವನು

ಕ್ರಿಸ್ತನಿಂದ ಹೊರಗಿರುವುದು ಅಂದರೇನು ಎಂಬುದನ್ನು ಹಾಗೂ ಆತನಲ್ಲಿ ಇರುವುದು ಅಂದರೇನು ಎಂಬುದನ್ನು ಒಬ್ಬ ವ್ಯಕ್ತಿಗೆ ಕಲಿಸುವಾಗ ಅವನು ಕೂಡಲೇ "ಕ್ರಿಸ್ತನೊಳಗೆ ಪ್ರವೇಶಿಸಲು ನಾವೇನು ಮಾಡಬೇಕು?" ಎಂದು ಪ್ರಶ್ನಿಸಬೇಕು. ಆ ಪ್ರಶ್ನೆಗೆ ಉತ್ತರವು ಪರಿಶುದ್ಧ ಬರಹದ ಎರಡು ವಾಕ್ಯಗಳಲ್ಲಿ ಕಂಡುಬರುತ್ತದೆ.

> ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? (ರೋಮಾಪುರ 6:3).
>
> ಹಾಗೆಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ (ಗಲಾತ್ಯ 3:27).

"ಕ್ರಿಸ್ತನಲ್ಲಿ" ನಾವು ಬಾಪ್ತಿಸ್ಮ ಹೊಂದಿದ್ದೇವೆಂದು ಈ ಎರಡು ವಾಕ್ಯಗಳು ಹೇಳುತ್ತವೆ. ಅವು ಅದನ್ನು ಪರೋಕ್ಷವಾಗಿ ಸೂಚಿಸಲಿಲ್ಲ; ಅವು ಅದನ್ನು ಸಾರುತ್ತವೆ. ಆತನಲ್ಲಿ ಬಾಪ್ತಿಸ್ಮ ಹೊಂದುವುದು - ಕ್ರಿಸ್ತನಲ್ಲಿ ಸೇರುವದಕ್ಕೆ ಕೇವಲ ಒಂದೇ ಒಂದು ಮಾರ್ಗವಾಗಿದೆ.

ಒಬ್ಬ ವ್ಯಕ್ತಿಯು ಬಾಪ್ತಿಸ್ಮ ಹೊಂದುವ ಮೊದಲು, ಅವನು ಕ್ರಿಸ್ತನ ಹೊರಗಿರುವನು. ಕ್ರಿಸ್ತನಲ್ಲಿ ಅವನು ಬಾಪ್ತಿಸ್ಮ ಹೊಂದುವಾಗ ಅವನು ಕ್ರಿಸ್ತನಲ್ಲಿರುವನು. ಒಬ್ಬ ವ್ಯಕ್ತಿಯು ಬಾಪ್ತಿಸ್ಮ ಹೊಂದುವ ಮೊದಲು ಹೃದಯದಲ್ಲಿಯೂ ಜೀವನದಲ್ಲಿಯೂ ಸಿದ್ಧತೆ ಮಾಡಿ

ಕೊಂಡಿರತಕ್ಕದ್ದು. ಅವನು ಪಶ್ಚಾತ್ತಾಪಪಟ್ಟು ವಿಶ್ವಾಸಿಯಾಗಿರತಕ್ಕದ್ದು (ಮಾರ್ಕ 16:16; ಅಪೊಸ್ತಲರ ಕೃತ್ಯ 2:38). ಪಶ್ಚಾತ್ತಾಪಪಟ್ಟ ವಿಶ್ವಾಸಿಯು ಮಾತ್ರವೇ ಪರಿಶುದ್ಧ ಬರಹಕ್ಕನುಗುಣವಾಗಿ ಬಾಪ್ತಿಸ್ಮ ಹೊಂದಲು ತಕ್ಕವನಾಗಿರುವನು. ಪಶ್ಚಾತ್ತಾಪಪಟ್ಟ ವಿಶ್ವಾಸಿಯು ತನ್ನ ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮದಲ್ಲಿ ಹೂಣಲ್ಪಡುವಾಗ ಅವನು ಕ್ರಿಸ್ತನಲ್ಲಿರುವನು.

## ಕ್ರಿಸ್ತನಲ್ಲಿ ಒಬ್ಬನು ಹೇಗೆ ಜೀವಿಸುವನು

ಮೂರು ಪದ ಪ್ರಯೋಗಗಳು ಕ್ರೈಸ್ತನ ಜೀವನ ಮತ್ತು ಮರಣವನ್ನು ಸಾರಾಂಶವಾಗಿ ಹೇಳುತ್ತವೆ.

(1) “ಕ್ರಿಸ್ತನಲ್ಲಿ ಸೇರುವುದು” ಇದು ನಾವಾಗಲೇ ಚರ್ಚಿಸಿದ ಮಾರ್ಪಡುವಿಕೆಯಾಗಿದೆ. ಬಾಪ್ತಿಸ್ಮಕ್ಕೆ ಒಪ್ಪಿಸಿಕೊಟ್ಟ ಪಶ್ಚಾತ್ತಾಪಪಟ್ಟ ವಿಶ್ವಾಸಿಯು ಕ್ರಿಸ್ತನ ಹೊರಗಿರುವದರಿಂದ ಕ್ರಿಸ್ತನ ಒಳಗೆ ಇರುವದಕ್ಕೆ ಹೋಗುತ್ತಾನೆ.

(2) “ಕ್ರಿಸ್ತನಲ್ಲಿ ನೆಲೆಗೊಳ್ಳುವುದು” ಪ್ರಾರಂಭಿಸುವದಷ್ಟೆ ಸಾಲುವದಿಲ್ಲ, “ಯಾವನು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ ಅವನು ಹೊರಕ್ಕೆ ಬಿಸಾಡಲ್ಪಡುವನು” (ಯೋಹಾನ 15:6) ಎಂದು ಯೇಸು ಹೇಳಿದನು. ಫಲಫಲಿಸುವದಕ್ಕಾಗಿಯೂ ದೇವರನ್ನು ಮೆಚ್ಚಿಸುವದಕ್ಕಾಗಿಯೂ ನಾವು ನಮ್ಮ ಜೀವನಗಳ ಅಂತ್ಯದವರೆಗೆ ನಂಬಿಗಸ್ತರಾಗಿರತಕ್ಕದ್ದು.

(3) “ಕರ್ತನಲ್ಲಿ ಸಾಯುವುದು.” “ಕರ್ತನ ಭಕ್ತರಾಗಿ ಸಾಯುವವರು ಧನ್ಯರು” (ಪ್ರಕಟಣೆ 14:13). “ಯೇಸುವಿನಲ್ಲಿದ್ದುಕೊಂಡು ನಿದ್ರೆ ಹೋಗುವವರನ್ನು ಸಹ ದೇವರು ಆತನೊಡನೆ ಕರೆದುಕೊಂಡು ಬರುವನು” (1 ಥೆಸಲೋನೀಕ 4:14). ಕ್ರಿಸ್ತನಲ್ಲಿ ಸಾಯುವದಕ್ಕೋಸ್ಕರವಾಗಿ ಮೊದಲು ನಾವು ಕ್ರಿಸ್ತನೊಳಗೆ ಸೇರಿಕೊಳ್ಳತಕ್ಕದ್ದು ಹಾಗೂ ನಂಬಿಗಸ್ತರೂ ಪ್ರತಿಷ್ಠಿತರೂ ಆಗಿ ಉಳಿಯಬೇಕು.

## ಮುಕ್ತಾಯ

ಕ್ರೈಸ್ತನಾಗಿದ್ದು ಕೊಂಡು ಕ್ರಿಸ್ತನಲ್ಲಿ ಮಾತ್ರವೇ ಕಂಡುಬರುವ ಆಶೀರ್ವಾದಗಳನ್ನು ಅನುಭವಿಸಲು ಯಾರು ಬಯಸುವದಿಲ್ಲ? ಕ್ರಿಸ್ತನಲ್ಲಿ ಭಕ್ತಿಯುಳ್ಳ ಜೀವಿತ ಜೀವಿಸುವವರೆಲ್ಲರೂ ಹಿಂಸೆಗಳನ್ನು ಸಹಿಸುವರು ಎಂಬುದು (2 ತಿಮೊಥೆ 3:12). ಆದರೆ ದೇವರ ವಾಕ್ಯದಲ್ಲಿ ಕಂಡುಬರುವ ಮಹಿಮೆಯುಳ್ಳ ವಾಗ್ದಾನಗಳ ಸಮ್ಮುಖದಲ್ಲಿ ಅಂಥ ಅಲ್ಪ ವಿಷಯಗಳನ್ನು ಮರೆತುಬಿಡುವೆವು ಎಂಬುದು ಸತ್ಯವಾಗಿದೆ (1 ಯೋಹಾನ 5:11; ಪ್ರಕಟಣೆ 14:13). “ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮೆ ಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ” (ರೋಮಾಪುರ 8:18).

© 2009 Truth for Today